ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 320/2014

ಫ್ರಾಸಾ – 3

ಚಾಸಾ – 2

**ಸಾಕ್ಷಿಯು ದಿಃ 17.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಬಸವಯ್ಯ ಎಂ. ಬಿ |
| ತಂದೆಯ ಹೆಸರು | : | ಬಸವಯ್ಯ |
| ವಯಸ್ಸು | : | 70 ವರ್ಷ |
| ವೃತ್ತಿ | : | ನಿವೃತ್ತ ಅರಣ್ಯ ವೀಕ್ಷಕ |
| ವಾಸಸ್ಥಳ | : | ಮದ್ದಯ್ಯನಹುಂಡಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ನಾನು 2003 ರಿಂದ 2015 ರ ವರೆಗೆ ಮದ್ದೂರು ಅರಣ್ಯ ವಲಯದಲ್ಲಿ ಅರಣ್ಯ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 15.04.2023 ರಂದು ದಾಖಲಿಸಿರುವ ದೋಷಾರೋಪಣೆಗೆ ಮುನ್ನ ಸಾಕ್ಷ್ಯದ ಹೇಳಿಕೆಯನ್ನು ಪರಿಗಣಿಸಬಹುದಾಗಿರುತ್ತದೆ ಎಂದು ಸಾಕ್ಷಿ ಮತ್ತು ಮಾನ್ಯ ಎಪಿಪಿ ರವರು ಕೋರಿರುತ್ತಾರೆ. ಆರೋಪಿಗಳ ಪರ ವಕೀಲರು ಸಹ ಸಮ್ಮತಿ ಸೂಚಿಸಿರುವುದರಿಂದ ದೋಷಾರೋಪಣೆಗೆ ಮುನ್ನ ದಾಖಲಿಸಿದ ಸಾಕ್ಷ್ಯವನ್ನೇ ಪರಿಗಣಿಸಲಾಗಿರುತ್ತದೆ.

**<u>ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ</u>**

ಆ ದಿನ ನಾವು ಬೆಳಿಗ್ಗೆ 10.30ರ ಸಮಯಕ್ಕೆ ಗಸ್ತನ್ನು ಪ್ರಾರಂಭಿಸಿರುತ್ತೇವೆ. ಆ ದಿನ ನಾನು, ಚಾಸಾ 1, 4 ಮತ್ತು ರಮೇಶ್ ಎಂಬುವವರು ನಮ್ಮ ಕಛೇರಿಯಿಂದ ಕೃತ್ಯ ನಡೆದ ಕಡೆಗೆ ನಡೆದುಕೊಂಡು ಹಾದು ಮುಂದೆ ಹೋಗುತ್ತಿದ್ದೆವು. ಸಾಮಾನ್ಯವಾಗಿ ನಾವು ಗಸ್ತು ಕರ್ತವ್ಯಕ್ಕೆ ಹೋದಾಗ ಡಿಜಿಟಲ್ ಕ್ಯಾಮೇರಾ, ಡಬಲ್ ಬ್ಯಾರೆಲ್ ಗನ್ ಮತ್ತು ಕತ್ತಿಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಕೃತ್ಯ ಸ್ಥಳದಲ್ಲಿ ರಕ್ತದ ಕಲೆಗಳು ಇರುವ ಬಗ್ಗೆ ಫೋಟೋ ತೆಗೆದಿರುತ್ತೇವೆ. ಒಂದು ಪ್ರಾಣಿ ಮತ್ತೊಂದು ಪ್ರಾಣಿಯನ್ನು ಕೊಂದು ಎಳೆದುಕೊಂಡು ಹೋಗುವಾಗ ರಕ್ತದ ಕಲೆಗಳು ಆಗುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ದೊಡ್ಡ ಪ್ರಾಣಿಗಳು ಇತರ ಪ್ರಾಣಿಗಳನ್ನು ಕೊಂದು ತಿಂದ ನಂತರ ಉಳಿಕೆ ಮಾಂಸವನ್ನು ಚಿಕ್ಕ ಚಿಕ್ಕ ಪ್ರಾಣಿಗಳು ತೆಗೆದುಕೊಂಡು ಹೋಗಿ ಶೇಖರಿಸಿ ಇಟ್ಟುಕೊಂಡಿರುತ್ತವೆ ಎಂದರೆ ಸರಿ. ಕೃತ್ಯ ಸ್ಥಳದಲ್ಲಿ ಸುಮಾರು 1 ½ ಮೀಟರ್ ಗಳ ಅಂತರಲ್ಲಿ ಒಂದೊಂದು ಕಾಲುಗಳು ಬಿದ್ದಿದ್ದವು. ಕೃತ್ಯ ಸ್ಥಳದಲ್ಲಿ ಇದ್ದ ಸದರಿ 2 ಕಾಲುಗಳು ಯಾವ ಸ್ಥಿತಿಯಲ್ಲಿದ್ದವು ಎಂದರೆ ಸಾಕ್ಷಿಯು ರಾತ್ರಿ ಸಮಯದಲ್ಲಿ ಅವುಗಳನ್ನು ಕತ್ತರಿಸಿ ಅಲ್ಲಿ ಇಟ್ಟ ಸ್ಥಿತಿಯಲ್ಲಿ ಇದ್ದವು ಎಂದು ನುಡಿಯುತ್ತಾರೆ. ಕೃತ್ಯ ಸ್ಥಳ ಗುಂಡ್ಲುಪೇಟೆ ಸುಲ್ತಾನ್ ಬತೇರಿ ಮುಖ್ಯ ರಸ್ತೆಯಾಗಿರುತ್ತದೆ ಎಂದರೆ ಸಾಕ್ಷಿಯು ಮುಖ್ಯ ರಸ್ತೆಯಿಂದ 30 ಅಡಿ ದೂರದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮುಖ್ಯ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಮತ್ತು ರಾತ್ರಿ 9.00 ರಿಂದ ಬೆಳಿಗ್ಗೆ 6.00 ರವರೆಗೆ ವಾಹನಗಳು ಓಡಾಡಲು ಅನುಮತಿ ಇಲ್ಲ ಎಂದರೆ ಸಾಕ್ಷಿಯು ಘಟನೆಯಾದ ಸಮಯದಲ್ಲಿ ನಿರ್ಭಂದ ಇರಲಿಲ್ಲ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳ ಕ್ಕೂ ನಮ್ಮ ಕಛೇರಿಗೂ 1 ರಿಂದ 1 ½ ಕಿ.ಮೀ ಅಂತರ ಇರುತ್ತದೆ. ರಾತ್ರಿ ಸಮಯದಲ್ಲಿ ನಮ್ಮ ಸಿಬ್ಬಂದಿಗಳು ಗಸ್ತಿನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಒಮ್ಮೆ ರಸ್ತೆಯಲ್ಲಿ ಜೀಪ್ ನಲ್ಲಿ ಹೋಗಿ ಬರುತ್ತಾರೆ ಎಂದು ನುಡಿಯುತ್ತಾರೆ. ರಾತ್ರಿ ಸಮಯದಲ್ಲಿಯೂ ನಮ್ಮ ಕಛೇರಿಯಲ್ಲಿ ಅಧಿಕಾರಿಗಳು ಇರುತ್ತಾರೆ ಎಂದರೆ ಸರಿ. ರಾತ್ರಿ ಸಮಯದಲ್ಲಿ ಗುಂಡು ಹಾರಿಸಿದರೆ ಶಬ್ಧ ನಮಗೆ ಕೇಳಿಸುತ್ತದೆ ಎಂದರೆ ಸರಿ. ಕೇರಳದಿಂದ ಆರೋಪಿಗಳನ್ನು ಬೆಳಿಗ್ಗೆ 8.00 ಗಂಟೆಗೆ ನಮ್ಮ ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ.

2. ಕೃತ್ಯ ನಡೆದ ಸ್ಥಳದಿಂದ ಕೇರಳದಲ್ಲಿ ಆರೋಪಿಗಳಿಂದ ಜಿಂಕೆ ಮಾಂಸ ವಶಪಡಿಸಿಕೊಂಡಿದ್ದೇವೆ ಎನ್ನುವ ಸ್ಥಳಕ್ಕೆ ಹೋಗಲು ಮದ್ದೂರು ಚೆಕ್ ಪೋಸ್ಟ್ , ಮೂಲೆ ಹೊಳೆ ಚೆಕ್ ಪೋಸ್ಟ್ ಮತ್ತು ಮುತ್ತಂಗ ಚೆಕ್ ಪೋಸ್ಟ್ ದಾಟಿ ಹೋಗಬೇಕು ಎಂದರೆ ಸರಿ. ಸದರಿ 3 ಚೆಕ್ ಪೋಸ್ಟ್ ಗಳಲ್ಲಿಯೂ ವಾಹನಗಳನ್ನು ತಪಾಸಣೆ ಮಾಡಿಯೇ ಕಳುಹಿಸಲಾಗುತ್ತದೆ ಎಂದರೆ ಸಾಕ್ಷಿಯು ಹಿಂದೆ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಮತ್ತು ಆರೋಪಿಗಳ ಸ್ವಇಚ್ಛಾ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಕೇರಳ ಅರಣ್ಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಪಂಚನಾಮೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ